


## ಸಂಗ್ರಹಯೋಗ್ಯ 'ಸುಧಾ'

ಪಿ.ಪಿ.ಉಪಾಧ್ಯ ಅವರ ಮುಖಪುಟ ಲೇಖನ 'ಯಶಸ್ವೀ ಬದುಕಿಗೆ 10 ಸೂತ್ರಗಳು' ಸಂಗ್ರಹಯೋಗ್ಯ ಬರಹ.

–ವಿಭಾ ಮುರಳೀಧರ್, ತುಮಕೂರು, ಸು.ವಿಜಯಲಕ್ಷ್ಮಿ, ಎಚ್.ಎನ್.ವಿಶ್ವನಾಥ್, ಶಿವಮೊಗ್ಗ/ ಎಚ್.ಆನಂದಕುಮಾರ್, ಚಿತ್ರದುರ್ಗ/ ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ/ ತರಂಗಿಣಿ, ತುಮಕೂರು

## 'ವಜ್ರಾಯುಷಿ' ತಪ್ಪು, 'ಚಿರಂಜೀವಿ' ಸರಿ

ಯಶಸ್ವೀ ಬದುಕಿಗೆ ಸೂತ್ರ ನೀಡಿರುವ ಲೇಖಕರು ಬಳಸಿರುವ 'ವಜ್ರಾಯುಷಿ' ಶಬ್ಧ ಪ್ರಯೋಗ ತಪ್ಪು. ವಜ್ರಕಾಯ, ವಜ್ರದೇಹ, ವಜ್ರಾಂಗ (ತದ್ಭವ: ಬಜರಂಗ) ಎಂಬ ಪದಗಳು ಸರಿ. ವಜ್ರದಂತೆ ಗಟ್ಟಿಯಾದ ದೇಹ ಎನ್ನುವುದು ಉಚಿತವಾದುದು. 'ವಜ್ರಾಯುಷಿ' ಬದಲು 'ಚಿರಂಜೀವಿ' ಪದ ಸೂಕ್ತವಾಗಿತ್ತು.

–ಬಿ.ಎಸ್.ರಾಮ್, ಬೆಂಗಳೂರು

## ಕಾರ್ಟೂನ್‌ಗೆ ಮೆಚ್ಚುಗೆ

ಅಡ್ವಾಣಿಯವರ ರಥಯಾತ್ರೆಯ ಹಿನ್ನೆಲೆಯಲ್ಲಿ ಪಿ.ಮಹಮ್ಮದ್ ಬರೆದ ಕಾರ್ಟೂನ್ ಬಹಳ ಮೆಚ್ಚುಗೆಯಾಯ್ತು. ಇದು ಬರೀ ನಗಿಸುವುದಕ್ಕಲ್ಲ, ಚಿರಕಾಲ ನೆನಪಿನಲ್ಲಿ ಉಳಿದುಬಿಡುತ್ತದೆ.

–ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ

## ಅಚ್ಚರಿ ತಂದ ಒಡವೆ!

'ಒಡವೆ ಕೊಡುವ ಎಟಿಎಂ...!' ಉಮಾ ಅನಂತ್‌ರ ಲೇಖನ ಓದಿ ಆಶ್ಚರ್ಯ ಆಯಿತು.

–ಎಂ.ಎಲ್. ಲಕ್ಷ್ಮಣ್‌ರಾವ್, ದಾವಣಗೆರೆ

## ಮೀಸೆ ತಿರುವಿ ಮಣ್ಣಾದರು!

'ಮೀಸೆಯನ್ನು ತಿರುವಿದವರು ಮಣ್ಣಾದರು' ಎಂಬಂತಾಗಿದೆ ಗಢಾಪಿ ಎಂಬ ರಾಜ ಇತಿಹಾಸ ಸೇರಿದ ಕಥೆ.

–ಲೋಕಪ್ರಿಯ, ಕೈವಾರ

## 'ಖುಷಿ' ತಂದ ಬರಹ

'ಖುಷ್'ವಂತ್ ಸಿಂಗ್ ಸಂಚರಿ ಬಾರಿಸಲಿ! ಅವರ ಬಗೆಗಿನ ಪಿ.ಶ್ರೀಧರ ನಾಯಕರ ಲೇಖನ ಆತ್ಮೀಯವಾಗಿತ್ತು.

ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ/ ಮೇ.ಗೋ.ಸುಬ್ಬಣ್ಣ, ಮೇಗರವಳ್ಳಿ/ ಎಲ್.ಎನ್.ಸಿಂಹ, ನಗರ

## ಯೋಜನೆ ಮತ್ತು ವ್ರತ!

'ಖುಷ್ವಂತ್ ಇನ್ನು ಬರೆಯುವುದಿಲ್ಲ' (ಪಿ. ಶ್ರೀಧರ್ ನಾಯಕ್). 'ಲೇಖನಿಗೆ ಇನ್ನೂ ಯಾರೂ ಕಾಂಡೋಮ್ ಕಂಡುಹಿಡಿದಿಲ್ಲ' ಎಂಬ ಖುಷ್ವಂತ್ ಹೇಳಿಕೆ, 'ಬರವಣಿಗೆಗೂ ಕುಟುಂಬ ಯೋಜನೆ ಬೇಕು!' ಎಂದೊಮ್ಮೆ ಕುವೆಂಪು ನುಡಿದುದನ್ನು ನೆನಪಿಸಿತು. (ಬಹುಮಂದಿಯದು ಬ್ರಹ್ಮಚರ್ಯ ವ್ರತ; ಅವರೇ ಸುಖಿಗಳು! ಏನಿಲ್ಲವಾದರೂ ಅವರಿಂದ ಕಾಗದದ ಉಳಿತಾಯದಿಂದಾಗಿ ಪರಿಸರ ರಕ್ಷಣೆ.)

–ಸಿಪಿಕೆ, ಮೈಸೂರು

## ರಾಮ್ ಎಂಬ ಉತ್ತರಭೂಪ

'ನೀವು ಕೇಳಿದಿರಿ?' ಕಾಲಂನಲ್ಲಿ ಉತ್ತರಭೂಪ ರಾಮ್ ಅವರ ಉತ್ತರಗಳು ಓದುಗರ ಮೇಲೆ ಉತ್ತಮ ಪರಿಣಾಮ ಬೀರುತ್ತವೆ. ವೈನತೇಯರ ವಿಚಾರ ಲಹರಿ ಚಿಂತನೆಗೆ ಹಾದಿ ಮಾಡಿಕೊಡುವಂತಿವೆ. ಮಾತೇ ಮುತ್ತು ಸಂಗ್ರಹಯೋಗ್ಯ.

–ಬಳ್ಳಾರಿ ಮಧ್ವರಾಜ್, ಬೆಂಗಳೂರು

## ಹಳ್ಳಿ ಜೀವನ ನೆನಪಿಸಿದ ಕಥೆ

ತಂಬ್ರಹಳ್ಳಿ ರಾಮನಮಲಿಯವರ 'ತಿಂದುಗ' ಕತಿ ಚಲೋ ಇತ್ರಿ. ಹಳ್ಳಿ ಜೀವನದ ನೆನಪು ಬಂತು.

– ಬಿ.ಎಸ್.ಮುಳ್ಳೂರ, ಹಲಗತ್ತಿ/ ಕೊಹಿಮ, ಬಸರಕೋಡು

## 12 ರೂ.ಗೆ ಮಾಯಾಲೋಕ!

'ಮತ್ಸ್ಯ ಕನ್ಯೆಯ ನಗರಿ' ಕೋಪನ್ ಹೇಗನ್ ಮಾಯಾಲೋಕವನ್ನು ಕೇವಲ 12 ರೂ.ಗಳಲ್ಲಿ ನೋಡಿದಂತಾಯಿತು. ಚಿತ್ರಗಳು ಮೋಹಕವಾಗಿದ್ದವು.

–ಎಲ್. ಸ್ವರ್ಣಲತಾ, ಹುಬ್ಬಳ್ಳಿ/ ಕೋಟೇಶ್ವರ ಸೂರ್ಯ ನಾರಾಯಣರಾವ್, ಬೆಂಗಳೂರು

## ಮತ್ತೆ ಮಹಾಭಾರತ 2 ಪ್ರಶ್ನೆ - ಸ್ಪಷ್ಟನೆ

ಡಾ.ಜಿ.ಕೃಷ್ಣಪ್ಪ ಅವರು ಸಾರವತ್ತಾಗಿ ಬರೆದಿರುವ ಲಕ್ಷ್ಮೀಶ ಕವಿಯ 'ಜೈಮಿನಿ ಭಾರತ' ಮತ್ತೆ ಅದಕ್ಕೆ 'ಸುಧಾ' ಪತ್ರಿಕೆಯವರು ಮರು ನಾಮಕರಣ ಮಾಡಿರುವ 'ಮತ್ತೆ ಮಹಾಭಾರತ'ದಲ್ಲಿ ಉಪಕಥೆಗಳ ಅನಾವರಣ ಚೆನ್ನಾಗಿ ಆಗುತ್ತಿದೆ.

ಅ.27ರ 'ಸುಧಾ'ದ ಕಂತಿನಲ್ಲಿ ಸೀತಾ ಪರಿತ್ಯಾಗ ನಡೆದದ್ದು ಒಬ್ಬ ಅಗಸನ ಮಾತಿನಿಂದ ಎಂದಿದೆ. ಆದರೆ ಎಲ್.ರಂಗನಾಥ ಶರ್ಮಾರ ಚಾಮರಾಜೋಕ್ತಿ ವಿಲಾಸ ಎಂಬ 'ಕನ್ನಡ ರಾಮಾಯಣ'ದಲ್ಲಿ ಸೀತಾದೇವಿಗೆ ಅಪವಾದ ಬಂದದ್ದು ಪುರಜನರಿಂದ ಎಂದಿದೆ. ಅಗಸನ ಪ್ರಸ್ತಾಪ ಎಲ್ಲೂ ಬಂದಿಲ್ಲ.

–ಎನ್ಕೆ ಶಂಕರಪ್ಪ, ಭದ್ರಾವತಿ

## ಮಾರ್ಪಾಡು ಯಾಕೆ? ಯಾವುದು ಸರಿ?

ಸೀತಾದೇವಿಯನ್ನು ವಾಲ್ಮೀಕಿ ಕವಿ ಅಯೋಧ್ಯೆಗೆ ಮರಳಿ ಕಳಿಸಿದ ನಂತರ ಶ್ರೀರಾಮನು ಸೀತೆಯೊಂದಿಗೆ ರಾಜ್ಯಭಾರ ಮಾಡಿದ ಎಂದು 'ಮತ್ತೆ ಮಹಾಭಾರತ'ದಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ ವಾಲ್ಮೀಕಿ ರಾಮಾಯಣದಲ್ಲಿ ಸೀತೆ ರಾಮನೊಂದಿಗೆ ತೆರಳದೇ ಭೂಮಿಯಲ್ಲಿ ವಿಲೀನಳಾಗುತ್ತಾಳೆ ಎಂದು ಶಾಲೆಯ ದಿನಗಳಲ್ಲಿ ಓದಿದ ನೆನಪು. ಲಕ್ಷ್ಮೀಶ ಯಾಕೆ ಈ ಮಾರ್ಪಾಡು ಮಾಡಿದ. ಹಾಗಾದರೆ ಯಾವುದು ಸರಿ?

–ಸುಮತಿ ಕೃಷ್ಣರಾವ್, ತುಮಕೂರು

## ನಾನು ಲಕ್ಷ್ಮೀಶನಿಗೆ ನಿಷ್ಠ

1)ಲಕ್ಷ್ಮೀಶನ ಕಾವ್ಯದಲ್ಲಿ ಅಗಸನ ಪ್ರಸ್ತಾಪವಿದೆ.

2)ವಾಲ್ಮೀಕಿ ರಾಮಾಯಣ ಶ್ರೀರಾಮನ ಪಟ್ಟಾಭಿಷೇಕದಲ್ಲಿ ಕೊನೆಯಾಗುತ್ತದೆ. ಲಕ್ಷ್ಮೀಶ ಕವಿ ಉತ್ತರ ರಾಮಾಯಣವನ್ನು ಕಾವ್ಯವಾಗಿ ನೀಡಿದ್ದಾನೆ. ಇಲ್ಲಿ ಸೀತಾ ಪರಿತ್ಯಾಗ, ಶ್ರೀರಾಮ– ಕುಶ ಲವರ ಯುದ್ಧ ಇದೆ. ರಾಮಾಯಣ ಕಥೆಯು ಕಾಲಾನುಕಾಲದಲ್ಲಿ ಹಲವು ರೂಪಗಳನ್ನು ಪಡೆದಿದೆ. ಲಕ್ಷ್ಮೀಶನ ಕಾವ್ಯದಲ್ಲಿ ಇರುವುದನ್ನು ನಾನು ಸರಳ ಕಥೆಯಾಗಿ ನೀಡಿದ್ದೇನೆ.

–ಡಾ.ಜಿ.ಕೃಷ್ಣಪ್ಪ, ಬೆಂಗಳೂರು




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಬೆಂಗಳೂರು ಮೈಸೂರು 9880444450

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಮೈಸೂರು ಖಾಯಂ ಮನೆ ವಿಳಾಸ ನಂ.8949, ವಿಜಯನಗರ 4ನೇ ಸ್ಟೇಜ್, ಎಸ್.ಆರ್.ಎಸ್. ಗೇಟ್ ಹತ್ತಿರ, ಯಶಸ್ವಿನಿ ಕಲ್ಯಾಣಮಂಟಪದ ಹತ್ತಿರ, ಹುಣಸೂರು ರಸ್ತೆ, ಹೂಟಗಳ್ಳಿ, ಮೈಸೂರು–18.

